( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.272/2015

ದಿನಾಂಕಃ 08-09-2022, ಪಿ ಡಬ್ಲ್ಯೂ–1

<u>ಪಾಟೀ ಸವಾಲು ಃ ಶ್ರೀ ಆರ್ ಸಿ ವಕೀಲರಿಂದಃ</u>

ಜಯಮ್ಮ ನವರು ನನಗೆ ಗೊತ್ತಿಲ್ಲ. ಜಯಮ್ಮನವರ ಗಂಡನ ಹೆಸರು ಈರಯ್ಯ . ಈರಯ್ಯನವರು ಈಗ ಪೌತಿಯಾಗಿದ್ದಾರೆ. ಈರಯ್ಯನವರಿಗೆ ರಂಗಸ್ವಾಮಿ ಎನ್ನುವವರು ಹಿರಿಮಗ ಎಂದರೆ ಸರಿ. ಈರಯ್ಯನವರಿಗೆ ಮೀನಾಕ್ಷಿ ಮತ್ತು ಲಕ್ಷ್ಮಣ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಅವರಿಗೆ ಎರಡು ಹೆಸರು ಇರುವುದರಿಂದ ನನಗೆ ಗೊತ್ತಿಲ್ಲ. ಜಯಮ್ಮ ರವರು ಹುಟ್ಟಿದ್ದು ಮುತ್ತಿಗೆ ಗ್ರಾಮದಲ್ಲಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಜಯಮ್ಮರವರು ಸಬ್ಬತ್ತಿ ಗ್ರಾಮದವರು ಎಂದು ನುಡಿಯುತ್ತಾರೆ. ಜಯಮ್ಮ ಮತ್ತು ಅವರ ಕುಟುಂಬ ಮುತ್ತಿಗೆ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಅವರು ಮುತ್ತಿಗೆ ಗ್ರಾಮ ಮತ್ತು ಸಬ್ಬತ್ತಿ ಗ್ರಾಮ ಎರಡೂ ಗ್ರಾಮದಲ್ಲಿ ಇರುತ್ತಿದ್ದರು.

ಈ ಹಂತದಲ್ಲಿ ಸಾಕ್ಷಿಯು ಸರಿಯಾದ ರೀತಿಯಲ್ಲಿ ಉತ್ತರಿಸದೇ ಇದ್ದ ಕಾರಣ ಪ್ರಕರಣವನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ)

2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ

ಅರಕಲಗೂಡು